Concession to tenants to get occupation rights on Lands under L. R. Act.

248 SRI L. T. THIMMAPPA HEDGE (Sagar).—Will the Minister for Revenue aud Agriculture be pleased to State:—

(a) in view of the decision by the Government to exempt the royts from payment of compensation amount who gets 1 hectare of wet land and 2 hectares of dry land as per the Land Reforms Act, whether it is estimated as to how many royts will get this benefit ;

(b) if so, the number of persons to whom the khata has been given so far and the amount of compensation borne by the Government in this behalf ;

(c) whether the facility would be made applicable to the compensation facility provided through the Land Development Bank at the beginning ?

SRI S, BANGARAPPA (Minister for Revenue and Agriculture).—

(a) Yes.

(b) Information is awaited from the Deputy Commissioners. Does not arise.

(c) Does not arise.

ಶ್ರೀ ಟಿ. ತಿಮ್ಮಪ್ಪ ಹೆಗಡೆ.—ಸ್ವಾಮಿ, ಇಲ್ಲಿ ನನ್ನ ಪ್ರಶ್ನೆಗೆ ಸರಿಯಾದ ಉತ್ತರವನ್ನು ಕೊಟ್ಟಿಲ್ಲ. ಒಂದು ಹೆಕ್ಟಾರ್ ತರಿ ಜಮೀನು ಮತ್ತು ೨ ಹೆಕ್ಟೇರ್ ಕೃಷಿ ಜಮೀನು ಹೊಂದಿರತಕ್ಕಂಥ ಖಾತೆದಾರರು ಎಷ್ಟಿದ್ದಾರೆ, ಅಂತಹವರನ್ನೇ ಪರಿಹಾರ ಕೊಡಲು ಸಾಧ್ಯವಿಲ್ಲವೇ ಎಂದು ನಾನು ಸರ್ಕಾರದವರನ್ನು ಕೇಳಿದ್ದು. ಸರ್ಕಾರದವರು ಏನಾದರು ಪರಿಹಾರ ಕೊಡದಿದ್ದರೆ ಮತ್ತೆ, ಅವರು ಸಾಲ ಕೊಡಬೇಕಾಗುತ್ತದೆ. ಇದು ಸರಿಯಲ್ಲ. ಇತ್ತೀಚೆಗೆ ಇಂತಹ ಪ್ರಕರಣಗಳಲ್ಲಿ ನೂರು ರೂಪಾಯಿಗಳನ್ನು ಪಡೆದು ಕೊಂಡು ಅವರಿಗೆ ಖಾತೆ ಮಾಡಿಕೊಡಬೇಕು ಎನ್ನತಕ್ಕಂಥ ತಿದ್ದುಪಡಿಯನ್ನು ಸರ್ಕಾರದವರು ತಂದರು. ಈಗ ಈ ರೀತಿಯಲ್ಲಿ ೨ ಹೆಕ್ಟೇರಿನೊಳಗೆ ಮತ್ತು ಒಂದು ಹೆಕ್ಟೇರಿನೊಳಗೆ ಜಮೀನು ಇರತಕ್ಕ ಎಷ್ಟು ಜನರಿಗೆ ಈ ಸೌಲಭ್ಯ ಸಿಗುತ್ತದೆ; ಎಂದು ಕೇಳಿರುವ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ. ಮಾನ್ಯ ಮಂತ್ರಿಗಳಿಗೂ ಕೂಡ ಗೊತ್ತಿದೆ, ತಲೆಮಾರಿನಿಂದ ಶೋಷಿತರಾದ ರೈತರಿಗೆ ಪರಿಹಾರಕೊಟ್ಟಿಲ್ಲ ಎನ್ನುವುದು ಮತ್ತೆ ಸಾಲ ಕ್ಕಾಗಿ ಬೀಳತಕ್ಕ ಪ್ರಸಂಗ ಬಂದಿದೆ. ಜಮೀನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಾಗಿಲ್ಲ ಅದಕ್ಕೋಸ್ಕರ ಸರ್ಕಾರದ ಸ್ಪಷ್ಟವಾದಂಥ ಅಭಿಪ್ರಾಯವೇನು. ಸಣ್ಣ ಜಮೀನುದಾರರು ಪರಿಹಾರ ಹಣ ಕೊಡುವ ಬಗ್ಗೆ ವಿನಾಯಿತಿ ಮಾಡುವ ಔದಾರ್ಯವನ್ನು ಸರ್ಕಾರ ಹೊಂದಿದೆಯೇ, ಹೊಂದಿದ್ದರೆ ಎಷ್ಟು ಪರಿಹಾರ ಸರ್ಕಾರ ಕಟ್ಟಿ ಕೊಡಬೇಕಾಗುತ್ತದೆ, ಭೂ ಅಭಿವೃದ್ಧಿ ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡು ಈ ಬಗ್ಗೆ ಕೊಡುವಂಥ ಹಣಕ್ಕೆ ಅಡ್ಜೆಸ್ಟ್ ಮಾಡಿದರು, ಆದು ಈಗ ಜಪ್ತಿಗೆ ಬರುವಂಥ ವಿಷಯ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ೧೦೦ ರೂಪಾಯಿ ತೆಗೆದುಕೊಂಡು ಆಮೇಲೆ ಸರ್ಟಿಫಿಕೇಟ್ ಆಫ್ ರಿಜಿಸ್ಟ್ರೇಷನ್ ಕೊಡಬೇಕು ಎನ್ನತಕ್ಕಂಥ ವಿಚಾರ ಇಲ್ಲಿರುವುದು. ಉಳಿದ ಹಣವನ್ನು ಕಾನೂನಿನ ಪರಿಮಿತಿಯೊಳಗೆ ಒಟ್ಟಾಗಿ ಅಥವಾ ೨೦ ಈಕ್ವಲ್ ಕಂತುಗಳಲ್ಲಿ ಕೊಡಬೇಕು ಎನ್ನುವುದು ಸರ್ಕಾರದ ನೀತಿಯಾಗಿದೆ. ೧೦೦ ರೂಪಾಯಿ ತೆಗೆದುಕೊಂಡು ಉಳಿದ ಪರಿಹಾರ ಹಣ ಕೊಡುವುದನ್ನು ವಿನಾಯಿತಿ ಮಾಡಬೇಕು ಎನ್ನುವುದು ಸರ್ಕಾರದ ನೀತಿಯಲ್ಲ. ಇಷ್ಟೇ ಔದಾರ್ಯ ಹಿಂದಿನ ಸರ್ಕಾರ ತೋರಿಸಿರುವದು. ಇದಕ್ಕಿಂತ ಹೆಚ್ಚಿನ ಔದಾರ್ಯ ತೋರಿಸಿಲ್ಲ. ಎರಡನೆಯದು, ಇದು ಇಷ್ಟರ

ವರೆಗೆ ತೀರ್ಮಾನವಾದ ೨ ಲಕ್ಷ ಒಕ್ಕಲುಗಳಿಗೆ ಅನ್ವಯವಾಗುತ್ತದೆ. ಎಲ್ಲಾ ಕೇಸುಗಳು ತೀರ್ಮಾನವಾದರೆ ೩.೫ ಲಕ್ಷ ಒಕ್ಕಲುಗಳಾಗುತ್ತವೆ. ಈಗ ೧೦೦ ರೂಪಾಯಿ ತೆಗೆದುಕೊಂಡು ಸರ್ಟಿಫಿಕೇಟ್ ಕೊಡಬೇಕು, ಉಳಿದ ಹಣವನ್ನು ಒಂದೇ ಸಾರಿ ಕೊಟ್ಟರೂ ಸ್ವೀಕಾರ ಮಾಡುತ್ತೇವೆ, ಅಥವಾ ೨೦ ಸಮ ಕಂತುಗಳಲ್ಲಿ ಕೊಟ್ಟರೂ ಸ್ವೀಕಾರ ಮಾಡುತ್ತೇವೆ. ಎಲ್ಲಾ ಕೇಸುಗಳು ತೀರ್ಮಾನವಾದರೆ ೩.೫ ಲಕ್ಷ ಜನರಿಗೆ ಅನುಕೂಲವಾಗುತ್ತದೆ. ಇಷ್ಟರವರೆಗೆ ಭೂ ಅಭಿವೃದ್ಧಿ ಬ್ಯಾಂಕಿನಿಂದ ಸಾಲ ತೆಗೆದುಕೊಂಡು ಒಕ್ಕಲುಗಳಿಗೆ ಪಟ್ಟಕೊಟ್ಟಿದ್ದಾರೆ. ಅವರಿಗೆ ಈ ಪ್ರಶ್ನೆ ಅನ್ವಯವಾಗುವುದಿಲ್ಲ. ಕೆಲವರು ಒಂದೇ ಸಾರಿ ಕೊಟ್ಟಿದ್ದಾರೆ, ಮತ್ತೆ ಕೆಲವರು ಕಂತುಗಳಲ್ಲಿ ಕೊಟ್ಟಿದ್ದಾರೆ. ಇಷ್ಟರವರೆಗೆ ಸಾಲ ತೆಗೆದುಕೊಂಡವರಿಗೆ ಇದು ಅನ್ವಯವಾಗುವುದಿಲ್ಲ. ೧೦೦ ರೂಪಾಯಿ ತೆಗೆದುಕೊಂಡು ಉಳಿದ ಪರಿಹಾರ ಧನ ವಿನಾಯಿತಿ ಮಾಡುವಂಥ ಪ್ರಶ್ನೆಯೇ ಇಲ್ಲ. ಹಿಂದಿನ ಸರ್ಕಾರ ಔದಾರ್ಯ ತೋರಿಸಿಲ್ಲ. ಆ ರೀತಿ ನಾವು ಚಿಂತನೆ ಮಾಡುತ್ತಾ ಇಲ್ಲ. ಮೊದಲು ೧೦೦ ರೂಪಾಯಿ ತೆಗೆದುಕೊಳ್ಳುತ್ತೇವೆ, ತಮ್ಮೇಲೆ ಉಳಿದ ಹಣ ತೆಗೆದುಕೊಳ್ಳುತ್ತೇವೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.—ಮಾನ್ಯ ಅರ್ಥ ಮಂತ್ರಿಗಳು ಗೇಣಿದಾರರ ವಿಚಾರವನ್ನು ಅರಿತವರು ಎಂದು ನಾನು ತಿಳಿದುಕೊಂಡಿದ್ದೇನೆ. ಅವರೂ ಕೂಡ ವಿನಾಯಿತಿ ಕೊಡಬೇಕು ಎನ್ನತಕ್ಕ ಅಭಿಪ್ರಾಯವನ್ನು ಹೊಂದಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಇಲ್ಲದೇ ಹೋದರೆ ರೈತರು ಇನ್ನೂ ಸಾಲದಲ್ಲಿ ಬೀಳುತ್ತಾರೆ, ಮತ್ತು ತನ್ನದಾಗಿ ಜಮೀನನ್ನು ಹೊಂದುವುದಕ್ಕೆ ಸಾಧ್ಯವಿಲ್ಲ. ಜಮೀನನ್ನು ಅಭಿವೃದ್ಧಿ ಮಾಡುವಂಥ ಚೈತನ್ಯ ೨೦ ವರ್ಷಗಳಾದರೂ ಬರುವುದಿಲ್ಲ. ಒಂದು ಕಂತನ್ನೂ ಕೂಡ ಕೊಡುವುದಕ್ಕೆ ಶೇಕಡ ೭೫ ರಷ್ಟು ಜನಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಹಿಂದಿನ ಸರಕಾರದವರು ಹೇಗಾದರೂ ಇರಲಿ, ತಾವು ಗೇಣಿದಾರರ ಸಮಸ್ಯೆ ಅರಿತರು, ತಾವು ಒಂದು ಆಶ್ವಾಸನೆ ಕೊಟ್ಟುಬಿಡಿ; ಹೋಗಲಿ. ಶೋಷಿತ ವರ್ಗದ ಬಗ್ಗೆ ರೈತರ ಬಗ್ಗೆ ಕಳಕಳಿ ಇರತಕ್ಕ ಸರ್ಕಾರ ಇವರಿಗೆ ಪುಗಸೆಟ್ಟೆ ಖಾತೆ ಹಕ್ಕು ಕೊಡುವಂಥ ತೀರ್ಮಾನ ತೆಗೆದುಕೊಳ್ಳುತ್ತದೆ ಎನ್ನತಕ್ಕ ಆಶ್ವಾಸನೆ ಕೊಡಿ ಎಂದು ತಮ್ಮ ಮೂಲಕ ಮಾನ್ಯ ಅರ್ಥ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಯಾವುದೇ ಹಣ ಕೊಡದೆ ಮುಫತ್ತಾಗಿ ಜಮೀನನ್ನು ಕೊಡಬೇಕು ಎಂದು ಮಾನ್ಯ ಸದಸ್ಯರು ಕೇಳುತ್ತಾ ಇದ್ದಾರೆ. ಆದರೆ ಈಗಿನ ಸರ್ಕಾರದ ನೀತಿ ಹಾಗಲ್ಲ. ೧೦೦ ರೂಪಾಯಿ ತೆಗೆದುಕೊಳ್ಳುವುದು, ಉಳಿದ ಹಣ ೨೦ ಕಂತುಗಳಲ್ಲಿ ಕೊಡಬೇಕಾಗುತ್ತದೆ. ಏಕೆಂದರೆ, ಭೂಮಿಯನ್ನು ತೆಗೆದುಕೊಂಡ ಮೇಲೆ ಆದರಲ್ಲಿ ಹೆಚ್ಚು ಕಲಸಮಾಡುವಂಥ ಇನಿಷಿಯೇಟೀವ್ ಅವರ ಹತ್ತಿರ ಇರಬೇಕು ಎನ್ನುವ ಉದ್ದೇಶದಿಂದಲೇ ಈ ಪ್ರೊತ್ಸವನ್ನು ನಿಗದಿಮಾಡಿದೆ. ಇದನ್ನು ತೆಗೆದು ಬಿಡಬೇಕು, ಮುಫತ್ತಾಗಿ ಭೂಮಿಯನ್ನು ಕೊಡಬೇಕು ಎನ್ನತಕ್ಕ ಔದಾರ್ಯ ಬಹಳ ನಿಧಾನವಾಗಿ ಮಾನ್ಯ ಸದಸ್ಯರಿಗೆ ಬಂದ ಹಾಗೆ ಇದೆ. ಸಣ್ಣ ರೈತರ ಬಗ್ಗೆ ನಮ್ಮ ಸರ್ಕಾರಕ್ಕೆ ಹೆಚ್ಚಿನ ಆತಂಕ ಇದೆ. ಅವರಿಗೆ ಸಾಕಷ್ಟು ಪರಿಹಾರ ಕೊಡಬೇಕು ಎನ್ನುವುದರಲ್ಲಿ ಬೇರೆ ಬೇರೆ ವಿಧದಲ್ಲಿ ಯೋಜನೆ ಸರ್ಕಾರ ಹಾಕಿಕೊಂಡಿದೆ. ಆದರೆ ಈ ದಿಶೆಯಲ್ಲಿ ಪೂರ್ತಿ ವಿನಾಯಿತಿ ಮಾಡುವುದು ಸರ್ಕಾರದ ಉದ್ದೇಶವಲ್ಲ.

Private High Schools in the State

261 SRI M. SRINIVAS (Srirangapatna).—Will the Minister for Education be pleased to state :—

(a) the number of Private High Schools started during 1978-79 in the state ;

(b) how many of them are run by SC and ST managements ?

SRI G. B. SHANKARA RAO (Minister for Education).—

(a) 40

(b) 3

ಶ್ರೀ ಎಂ. ಶ್ರೀನಿವಾಸ.—ಈ ಪ್ರಶ್ನೆಯನ್ನು ನಾನು ಕಳೆದ ವರ್ಷ ಕೊಟ್ಟಿದ್ದು, ಕಳೆದ ವರ್ಷದ ಅಂದರೆ ೧೯೭೮-೭೯ನೇ ಸಾಲಿನ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಈಗ ೧೯೭೯–೮೦ನೇ ಸಾಲಿನ ಅಂಕಿ ಅಂಶಗಳು ಇದೆಯೇ ಎಂದು ಕೇಳುತ್ತಿದ್ದೇನೆ.

Sri G.B. Shankar Rao.—The hon. Member Shri M. Srinivas has asked the information only for the year 1978-79; and I have fur nished the same. If he wants the information relating to the year 1979-80, I want another notice.

ಶ್ರೀ ಎಂ. ಶ್ರೀನಿವಾಸ್.—೧೯೮೦–೮೧ಕ್ಕೆ ಎಷ್ಟು ಅಪ್ಲಿಕೇಷನ್ಸ್ ಬಂದಿವೆ ಎನ್ನುತಕ್ಕ ಅಂಕಿ ಅಂಶ ಗಳು ಇದೆಯೇ ?

ಶ್ರೀ ಜಿ.ಬಿ. ಶಂಕರರಾವ್.—ತಾವು ಪ್ರಶ್ನೆಯಲ್ಲಿ ೧೯೭೮-೭೯ನೇ ಸಾಲಿನ ವಿಷಯವನ್ನು ಕೇಳಿದ್ದೀರಿ ಅದಕ್ಕೆ ಉತ್ತರ ಕೊಟ್ಟಿದ್ದೇನೆ ಈಗ ೧೯೮೦–೮೧ನೇ ಸಾಲಿನ ವಿಚಾರವನ್ನು ಕೇಳುತ್ತಿದ್ದೀರಿ. ಅದನ್ನು ತರಿಸಿಕೊಂಡು ನೋಡಬೇಕು.

ಅಧ್ಯಕ್ಷರು.—ಮಾಹಿತಿ ಇದ್ದರೆ ಕೊಡಿ, ಇಲ್ಲದೇ ಹೋದರೆ ಏಕೆ ಸುಮ್ಮನೆ ಕಷ್ಟಪಡುತ್ತೀರಿ.

Sri G.B. Shankar Rao,—Mr. Speaker Sir, you must know our difficulty also. I cannot answer this type of questions off-hand. The hon. Member Sri M. Srinivas is asking for general information.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಮಂತ್ರಿಗಳು ನೇರವಾಗಿ ಉತ್ತರ ಕೊಡುವುದಿಲ್ಲ.

ಶ್ರೀ ಜಿ.ಬಿ. ಶಂಕರರಾವ್.—ಪ್ರಶ್ನೆ ೧೯೭೯–೮೦ನೇ ವರ್ಷಕ್ಕೆ ಸಂಬಂಧಪಟ್ಟಿದು. ಅದಕ್ಕೆ ಉತ್ತರ ಹೇಳಿದ್ದೇನೆ. ಆದರೆ ಈಗ ಪ್ರಶ್ನೆ ಕೇಳುತ್ತಿರುವುದು ೧೯೮೦-೮೧ನೇ ವರ್ಷಕ್ಕೆ ಸಂಬಂಧಪಟ್ಟಿದ್ದು. ಅದಕ್ಕೋಸ್ಕರ ಉತ್ತರ ತರಿಸಿ ನೋಡಬೇಕು ಎಂದು ಹೇಳಿದ್ದೇನೆ.

ಶ್ರೀ ಎಂ. ಶ್ರೀನಿವಾಸ.—ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮಜಾತಿಯವರು ನಡೆಸುತ್ತಿರುವ ಶಾಲೆಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ '೩' ಎಂದು ಉತ್ತರ ಕೊಟ್ಟಿದ್ದೀರಿ. ಈ ಮೂರನ್ನು ಯಾವ ಸ್ಥಳಗಳಲ್ಲಿ ನಡೆಸುತ್ತಿದ್ದಾರೆ ಎಂದು ತಿಳಿಸುತ್ತೀರಾ?

ಶ್ರೀ ಜಿ.ಬಿ. ಶಂಕರರಾವ್.—ಒಂದು ಬೀದರ್‌ನಲ್ಲಿದೆ, ಎರಡನೆಯದು ಭದ್ರಾವತಿಯಲ್ಲಿದೆ, ಮೂರನೆಯದು ಮತ್ತಿಕೆರೆಯಲ್ಲಿದೆ.

ಶ್ರೀ ಎಂ. ಶ್ರೀನಿವಾಸ.—ಬೆಂಗಳೂರಿನಲ್ಲಿ ಪ್ರೌಢಶಾಲೆಯನ್ನು ನಡೆಸುತ್ತಿದ್ದಾರೆಯೇ ?

ಶ್ರೀ ಜಿ. ಬಿ. ಶಂಕರರಾವ್.—ಕಮಲಾನೆಹರೂ ಹೈಸ್ಕೂಲ್, ಎಕ್ಸ್‌ಟೆನ್‌ಷನ್, ಯಶವಂತಪುರ

ಶ್ರೀ ಶೇರ್‌ಖಾನ್.—ಉತ್ತರ (ಬಿ) ಯಲ್ಲಿ ಎಸ್ ಸಿ/ಎಸ್.ಟಿ. ಮ್ಯಾನೇಜ್‌ಮೆಂಟ್‌ನವರು ಹೈಸ್ಕೂಲು ರನ್ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಎಜುಕೇಷನಲ್ ಪಾಲಿಸಿ ಪ್ರಕಾರ ಈಗ ಎಸ್.ಸಿ./ಎಸ್.ಟಿ.ಯವರಿಗೆ ಏನು ಅವಕಾಶ ಕೊಟ್ಟಿದೀರಿ, ಅದೇ ರೀತಿ ಮೈನಾರಿಟೀಸ್ ಕ್ಲಾಸಸ್ ಬಂದು ಕೇಳಿದರೆ ಅವಕಾಶ ಕೊಡುತ್ತೀರಾ?

ಶ್ರೀ ಜಿ. ಬಿ. ಶಂಕರರಾವ್.—ಎಸ್.ಸಿ./ಎಸ್.ಟಿ.ಯವರು ಪ್ರೈವೇಟ್ ಮ್ಯಾನೇಜ್‌ಮೆಂಟ್ ಮಾಡಿಕೊಂಡು ನಡೆಸುತ್ತಿರುವ ಶಾಲೆಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ ಮೂರು ಕಡೆ ಎಂದು ಹೇಳಿದ್ದೇನೆ. ಇನ್ನು ಮುಂದೆ ಯಾರಾದರೂ ಆ ರೀತಿ ಮುಂದೆ ಬಂದು ಶಾಲೆ ನಡೆಸುತ್ತೇವೆಂದು ಹೇಳಿದರೆ ಅವರಿಗೂ ಸಹ ಪರ್ಮೀಷನ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆದರೆ ಇಲ್ಲಿಯವರೆಗೆ ಯಾರೂ ಮುಂದೆ ಬಂದಿಲ್ಲ.

X-Ray facilities at Chittapur Civil Dispensary

275. SRI PRABHAKAR TELKAR (Chittapur),—Will the Minister for Health and Family Welfare be pleased to state.—

(a) whether the Government is aware that there is no X-Ray facilities at Chittapur Civil Dispensary in Gulbarga District ;

(b) whether the Government is providing the X-Ray plant to Chittapur Civil Hospital ?

SRI A.K. ABDUL SAMAD (Minister for Health and Family Welfare)

(a) Yes

(b) Supply of new X-Ray Unit will be considered at the time of up-grading the present Dispensary (Primary Health Unit) subject to availability of funds.

SRI PRABHAKAR TELKAR.—In Chitapur Taluk there is a population of about 2 lakhs. As per your reply there are no facilities of X-Ray at Chitapur Dispensary though it is a Taluk hospital. It is also the policy of the Government that every Taluk headquarter's hospital must have this X-Ray facility. What is the reason for not providing such X-Ray facility to Chitapur Taluk hospital?

SRI A.K. ABDUL SAMAD.—It is also the policy of the Government to upgrade all the Taluk level health units to a 50 bedded hospital with X-Ray facilities subject to the availability of funds. We are considering to provide X-Ray to your hospital.

SRI PRABHAKAR TELKAR.—My question is that when all other Taluk hospitals are having such facilities, why only Chitapur hospital is not having it, My request is that at least there should be an assurance to provide it at the earliest. Every time people from Chitapur will have to go to Gulbarga and other places to get X-Ray facility. Will the Government assure that it will be provided in the near future?

SRI A.K. ABDUL SAMAD,—We will provide X-Ray facilities to Chitapur hospital.

SRI QUMARUL ISLAM.—In Chitapur there are so many factories, ncluding cement factory. Therefore, I request the Government to give top priority in giving this facility to that hospital.

SRI A.K. ABDUL SAMAD,—We will bear it in mind,

ಶ್ರೀ ಶೇರ್‌ಖಾನ್.—ಸ್ವಾಮಿ, ಚಿತ್ತಾಪುರದ ಒಂದು ಎಕ್ಸರೇ ಯೂನಿಟ್ ಕೊಡುವುದಕ್ಕೆ ಪ್ರಿಯಾರಿಟಿ ಕೊಡುತ್ತೇವೆಂದು ಹೇಳುತ್ತಿದ್ದೀರಿ ಅದು ಕರೆಕ್ಟ್. ಆದರೆ ಅಲ್ಲಿ ಮಿಷನ್ ನಡೆಸುವುದಕ್ಕೆ ಟೆಕ್ನೀಶಿಯನ್ಸ್ ಇಲ್ಲ. ಒಂದು ಜಾಗದಲ್ಲಿ ಎಕ್ಸ್‌ರೇ ಯೂನಿಟ್ ಇದ್ದರೆ ಆಪರೇಟರ್ಸ್ ಇಲ್ಲ, ಆಪರೇಟರ್ಸ್ ಇದ್ದರೆ ಯೂನಿಟ್ ಇಲ್ಲ. ಹೀಗಾಗಿದೆ ಈಗಿನ ಪರಿಸ್ಥಿತಿ. ಮತ್ತೆ ಎರಡೂ ಇದ್ದರೆ ಫಿಲಂ ಇಲ್ಲ ಅಂತ ಹೇಳಂ

ತ್ತಾರೆ. ಇದರಿಂದ ಆಲ್ಲಿನ ಜನಗಳಿಗೆ ಬಹಳ ತ್ರಾಸವಾಗಿದೆ. ಇದರ ಬಗ್ಗೆ ನಮ್ಮ ಏರಿಯಾದಲ್ಲಿ ಬಹಳಷ್ಟು ದೂರುಗಳಿವೆ. ಆದುದರಿಂದ ಇದನ್ನು ಬಗೆಹರಿಸುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಸ್ವಾಮಿ ?

ಶ್ರೀ ಎ. ಕೆ. ಅಬ್ದುಲ್ ಸಮದ್.—ಟೆಕ್ನೀಶಿಯನ್ಸ್‌ಗೆ ಟ್ರೈನಿಂಗ್ ಕೊಡಬೇಕಾಗುತ್ತದೆ. ಈ ಟ್ರೈನಿಂಗ್ ಪೀರಿಯಡ್ ಈ ಮಾರ್ಚಿ ಅಥವಾ ಏಪ್ರಿಲ್‌ಗೆ ಮುಗಿಯುತ್ತದೆ. ಆಗ ೧೮ ಜನರನ್ನು ಪೋಸ್ಟ್ ಮಾಡುತ್ತೇವೆ.

ಶ್ರೀ ಪ್ರಭಾಕರ್ ತೇಲ್ಕರ್.—ಚಿತ್ತಾಪುರ ತಾಲ್ಲೂಕಿನಲ್ಲಿ ವೀಡಿಯಾ ಸಿಮೆಂಟ್ ಫ್ಯಾಕ್ಟರಿ ಬರುತ್ತದೆ ಮತ್ತು ಶಹಬಾದ್ ಸಿಮೆಂಟ್ ಫ್ಯಾಕ್ಟರಿ ಬೇರೆ ಇದೆ, ಇನ್ನು ಬೇರೆ ಬೇರೆ ಫ್ಯಾಕ್ಟರಿಗಳು ಇದೆ. ಆಲ್ಲಿ ಒಂದು ಎಕ್ಸರೇ ಯೂನಿಟ್ ಇಲ್ಲದೇ ಇರುವುದರಿಂದ ಅಲ್ಲಿ ಕೆಲಸ ಮಾಡುತ್ತಿರತಕ್ಕಂಥ ನೌಕರರುಗಳು ಕೈ ಕಾಲು ಮುರಿದುಕೊಂಡಿದ್ದರೂ ಸಹ ಅವರಿಗೆ ಸರಿಯಾದ ಮಾಹಿತಿ ಸಿಗದೇ ಇರುವುದರಿಂದ ಬಹಳ ತೊಂದರೆ ಪಡುತ್ತಿದ್ದಾರೆ. ಆದುದರಿಂದ ಇದನ್ನು ಆದಷ್ಟು ಬೇಗ ತೀವ್ರವಾಗಿ ಪರಿಶೀಲನೆ ಮಾಡಿ ಈ ವರ್ಷವೇ ಆಲ್ಲಿಗೇ ಎಕ್ಸರೇ ಸೌಲಭ್ಯವನ್ನು ಒದಗಿಸಿಕೊಟ್ಟರೆ ಉತ್ತಮವೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಕೆ. ಅಬ್ದುಲ್ ಸಮದ್.—We will consider this.

MR. SPEAKER.—Questions are over

Lathi charge at Bagalkote

ಶ್ರೀ ಪಿ. ಕೆ. ಕಳ್ಳಿಗುಡ್ಡ.—ಅಧ್ಯಕ್ಷರೇ, ಬಾಗಲ್‌ಕೋಟೆಯಲ್ಲಿ ಭಾನುವಾರ ಸಂಜೆ ವಿದ್ಯಾರ್ಥಿಗಳ ಮೇಲೆ ಗೋಲಿಬಾರ್ ಮಾಡಿದ್ದಾರೆ. ಅಲ್ಲಿ ಒಂದು ವಾರಗಳ ಕಾಲ ಕರ್‌ಫ್ಯೂ ವಿಧಿಸಿದ್ದಾರೆ. ಇದರಿಂದ ಆಲ್ಲಿಯ ಜನರು ಭಯಭೀತರಾಗಿದ್ದಾರೆ. ಇದರಲ್ಲಿ ಹುಡುಗರ ಜವಾಬ್ದಾರಿ ಇದೆಯೇ ಅಥವಾ ಇನ್ನು ಯಾರದು ಇದೆ ಎಂಬುದರ ಬಗ್ಗೆ ತನಿಖೆಯಾಗಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳವರಲ್ಲಿ ವಿನಂತಿ ಮಾಡಿಕೆ ಳ್ಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ಸಂಬಂಧಪಟ್ಟ ಮಂತ್ರಿಗಳವರು ಸಮಯೋಜಿತವಾದ ಉತ್ತರ ಕೊಡುತ್ತಾರೆ ದಯವಿಟ್ಟು ಕುಳಿತುಕೊಳ್ಳಿ.

SRI B. B. SAYANAK —I too have given notice of the same incident. In Bagalkot lathi charge has taken place and many people have been injured. The Hon. Chief Minister is here and he can give reply.

MR. SPEAKER.—We have received the notice just today. We will send it to Government and the Chief Minister will make a statement tomorrow.

Inadequate Supply of Milk by the Bangalore Dairy

ಶ್ರೀ ಎ. ಲಕ್ಷ್ಮೀಸಾಗರ್.—ಬೆಂಗಳೂರಿನ ಹಾಲಿನ ಡೈರಿಯಿಂದ ಹಾಲಿನ ಪೂರೈಕೆ ಪೂರ್ಣವಾಗಿ ಬೆಂಗಳೂರು ನಗರದಲ್ಲಿ ಆಗುತ್ತಿಲ್ಲ. ಮೊನ್ನೆ ಅಂದರೆ ೧೦ನೇ ತಾರೀಖು ಸುಮಾರು ಶೇಕಡ ೫೦ರಷ್ಟು ಆಗಿದೆ. ಅದೂ ಕೂಡ ಬಹಳ ತಡವಾಗಿ ಸರಬರಾಜು ಮಾಡಿದ್ದಾರೆ. ೧೧ ರಂದು ಕೂಡ ತಡವಾಗಿ ಶೇಕಡ ೫೦ ರಷ್ಟು ಆಗಿದೆ. ೧೨ ರಂದು ಸಹ ಶೇಕಡ ೪೦ರಷ್ಟು ಹಾಲನ್ನು ಅದೂ ತಡವಾಗಿ ಪೂರೈಕೆ ಮಾಡಿದ್ದಾರೆ. ರಾಜಾಜಿನಗರದ ಕೆಲವು ಕಡೆ ಪೂರ್ತಿಯಾಗಿ ಹಾಲಿನ ಸರಬರಾಜು ಆಗಿಲ್ಲ. ಇದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿದೆ. ಹಳ್ಳಿಗಳಿಂದ ಹಾಲು ತರತಕ್ಕವರಿಂದ ಹಾಲನ್ನು ತೆಗೆದು ಕೊಳ್ಳಬಾರದೆಂಬ ಕೆಲವು ನಿರ್ಬಂಧಗಳು ಇವೆ. ಹೀಗಾಗಿ ನಾಗರೀಕರಿಗೆ ತುಂಬ ತೊಂದರೆಯಾಗಿದೆ. ಆದ್ದರಿಂದ, ಸರ್ಕಾರದವರು ಇದರ ಬಗ್ಗೆ ಸರಿಯಾಗಿ ಕ್ರಮ ತೆಗೆದುಕೊಂಡು ಹಾಲಿನ ಪೂರೈಕೆ ಮಾಡಬೇಕು.